

# ಮರಕ್ಕೆ ಕುರಿ ನೇತು ಹಾಕುವ ಮೌಢ್ಯ!

ಗ್ರಾಮೀಣ ಪ್ರದೇಶಗಳಲ್ಲಿರುವ ಕೆಲವು ಆಚರಣೆಗಳಿಗೆ ಯಾವುದೇ ವೈಜ್ಞಾನಿಕ ಹಿನ್ನೆಲೆಯಿರುವುದಿಲ್ಲ. ಅನಾದಿಕಾಲದಿಂದಲೂ ಕಣ್ಮುಚ್ಚಿ ಆಚರಿಸಿಕೊಂಡು ಬರುತ್ತಿರುತ್ತಾರೆ. ಅಂತಹ ಮೌಢ್ಯಾಚಾರಣೆಯ ಚಿತ್ರವಿದು. ಮರಕ್ಕೆ ಕುರಿ ನೇತು ಹಾಕಿರುವುದು ಈ ಚಿತ್ರದಲ್ಲಿ ಕಾಣುತ್ತದೆ. ಬಳ್ಳಾರಿ ಜಿಲ್ಲೆಯ ಸಂಡೂರು ಬಳಿಯಿರುವ 'ನವಿಲು ಸ್ವಾಮಿ ದೇವಾಲಯ'ಕ್ಕೆ ಇತ್ತೀಚೆಗೆ ಹೋಗಿದ್ದೆ. ಆಗ ರಸ್ತೆ ಬದಿಯಲ್ಲಿ ಮರವೊಂದಕ್ಕೆ ಕುರಿಯನ್ನು ನೇತು ಹಾಕಲಾಗಿತ್ತು. ಹತ್ತಿರಕ್ಕೆ ಹೋಗಿ ನೋಡಿದೆ. ಅದು ಸತ್ತಿತ್ತು.

'ಹೀಗೇಕೆ ಕುರಿಯನ್ನು ಮರಕ್ಕೆ ನೇತು ಹಾಕಲಾಗಿದೆ' ಎಂದು ಅಲ್ಲಿದ್ದ ಸ್ಥಳೀಯರನ್ನು ಕೇಳಿದೆ. ಅವರು ನೀಡಿದ ಉತ್ತರ ಕೇಳಿ ಅವರ ನಂಬಿಕೆಗೆ ಏನನ್ನಬೇಕು ಅಂತ ಗೊತ್ತಾಗದೆ ಸುಮ್ಮನಾದೆ. 'ಕುರಿಗಳಿಗೆ ರೋಗ ರುಜಿನಗಳು ಬರದಿರಲಿ' ಎಂದು ಜೀವಂತ ಕುರಿಯನ್ನು ಅಥವಾ ರೋಗದಿಂದ ಬಳಲುತ್ತಿರುವ ಕುರಿಯನ್ನು ಬೇವಿನ ಮರಕ್ಕೆ ನೇತು ಹಾಕುವುದು ಅಲ್ಲಿ ವಾಡಿಕೆಯಂತೆ. ಹಾಗೆ ಮಾಡುವುದರಿಂದ ಇತರೆ ಕುರಿಗಳಿಗೆ ರೋಗ ಬರುವುದಿಲ್ಲವೆಂಬುದು ಸ್ಥಳಿಯರ ನಂಬಿಕೆ. ಹೀಗೆ ಮಾಡುವುದರಿಂದ ಕುರಿಗಳು ರೋಗದಿಂದ ಪಾರಾಗುತ್ತವೆ ಎನ್ನುವುದು ನಿಜಕ್ಕೂ ಮೌಢ್ಯಾಚಾರಣೆ.

–ಜಿ.ಪದ್ಮಾ, ಸಂಡೂರು

# 'ಲಂಬಾಡಿ ತಾಂಡ' ಹೂವು!



ಉಡುಪಿ, ದಕ್ಷಿಣಕನ್ನಡ ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ ಮಳೆಗಾಲದ ಭತ್ತದ ಕಾರ್ತಿಬೆಳೆ ಕೊಯ್ಲು ಮುಗಿದ ನಂತರ ಗದ್ದೆಗಳಲ್ಲಿ ಸಣ್ಣಗೆ ತಂತಾನೆ ಬೆಳೆಯುವ ಹಸಿರು ಸಸ್ಯವೊಂದು ವಿಶಿಷ್ಟ ಪರಿಮಳ ಬೀರುತ್ತದೆ. ಅಕ್ಟೋಬರ್‌ನಿಂದ ಫೆಬ್ರುವರಿಯವರೆಗೆ ಕಾಣಸಿಗುವ ಈ ಗಿಡ ಸುಮಾರು ಒಂದಡಿ ಎತ್ತರಕ್ಕೆ ಬೆಳೆದು ಸುತ್ತಲೂ ಟಿಸಿಲುಗಳೊಡೆದು ಹಬ್ಬುತ್ತದೆ. ಗಿಡ ಬೆಳೆದಂತೆ ಆರಂಭದಲ್ಲಿ ಹಸಿರು ಬಣ್ಣದ ಗೋಲಿ ಗಾತ್ರದ ಹೂವನ್ನು ಬಿಟ್ಟರೆ ಕ್ರಮೇಣ ಅದು ಮಾಗುತ್ತಾ ಕಡುಗುಲಾಬಿ ಬಣ್ಣಕ್ಕೆ ತಿರುಗಿ ಕೊನೆಗೆ ಕಂದುಬಣ್ಣದೊಂದಿಗೆ ಒಣಗುತ್ತದೆ. ಕೊರೊನಾ ವೈರಸ್‌ನ ಚಿತ್ರದ ರೂಪವನ್ನು ನೆನಪಿಸುವಂತಹ ಈ ಹೂವಿನ, ಗಿಡದ ಹೆಸರು ಲಂಬಾಡಿ ತಾಂಡ! ಮೊನ್ನೆ ಊರಿಗೆ ಹೋದಾಗ ಇದರ ಚಂದವನ್ನು ಕಣ್ತುಂಬಿಕೊಂಡೆ. ವರ್ಷಕ್ಕೊಮ್ಮೆ ಕಂಡುಬರುವ ಈ ಗಿಡಗಳನ್ನು ಹಿಂದಿನ ಕಾಲದಲ್ಲಿ ಕಿತ್ತು, ಒಣಗಿಸಿ, ಬೆಂಕಿಹಚ್ಚಿ ಅದು ಬೂದಿಯಾಗುವ ಮುನ್ನ ನೀರೆರಚಿ ಕುಟ್ಟಿ ಕರಿ ಉಂಡೆಗಳನ್ನಾಗಿ ಮಾಡುತ್ತಿದ್ದರು. ಸಗಣಿ ನೀರಿನೊಂದಿಗೆ ಈ ಕರಿಉಂಡೆಗಳನ್ನು ಬೇಕಾದ ಪ್ರಮಾಣದಲ್ಲಿ ಕಲಸಿ ಅದರಿಂದ ಮಣ್ಣಿನ ಕರಿನೆಲವನ್ನು ಅಡಿಕೆ ಹಾಳೆಯ ತುಂಡಿನಿಂದ ಸಾರಿಸುತ್ತಿದ್ದರು. ದನಕರುಗಳ ಹಟ್ಟಿಯಲ್ಲಿ ಸಗಣಿಯೊಂದಿಗೆ ಮಿಳಿತವಾಗುವ ಇದು ಉತ್ತಮ ಸಾವಯವ ಗೊಬ್ಬರವೂ ಹೌದು. ಔಷಧೀಯ ಗುಣವಿರುವ ಇದನ್ನು ತಲೆನೋವು, ಬಾವು ಮತ್ತು ಚರ್ಮದ ಚಿಕಿತ್ಸೆಗೆ ಬಳಸುತ್ತಾರೆ.

–ಧರ್ಮಾನಂದ ಶಿರ್ವ, ಬೆಂಗಳೂರು

# ಆಕರ್ಷಕ ಹೂವಿನ ಮಳೆಲಿಲ್ಲಿ!



ಅಮರಿಲ್ಲಿಡಾಸಿಯೆ ಕುಟುಂಬಕ್ಕೆ ಸೇರಿದ 'ಜೆಫಿರಾಂಥೆಸ್ ಕ್ಯಾಂಡಿಡಾ' ಎಂಬ ವೈಜ್ಞಾನಿಕ ಹೆಸರುಳ್ಳ ಒಂದು ಬಗೆಯ ಈ ಲಿಲ್ಲಿ ಸಸ್ಯಕ್ಕೆ 'ಮಳೆಲಿಲ್ಲಿ' ಎಂದೂ ಕರೆಯಲಾಗುತ್ತದೆ. ಇದಕ್ಕೆ ಕಾರಣ ಈ ಸಸ್ಯವು ವರ್ಷದ ಮೊದಲ ಮಳೆ ಬಿದ್ದ ನಂತರವೇ ಅಂದರೆ ಆಗಸ್ಟ್‌ನಿಂದ ಸೆಪ್ಟೆಂಬರ್‌ವರೆಗೆ ಸುಂದರವಾದ ಹೂಗಳನ್ನು ಅರಳಿಸುತ್ತದೆ. ಆದ್ದರಿಂದ ಇದನ್ನು ಮಳೆಲಿಲ್ಲಿ ಎಂಬ ಉಪನಾಮದೊಂದಿಗೆ ಕರೆಯಲಾಗುತ್ತದೆ.

ಹದಿನೈದರಿಂದ ಇಪ್ಪತ್ತೈದು ಸೆಂಟಿಮೀಟರ್‌ಗಳಷ್ಟು ಎತ್ತರದವರೆಗೂ ಬೆಳೆಯಬಲ್ಲ ಎಲೆಗಳು ಹೊಳಪುಳ್ಳ ಹಸಿರು ಬಣ್ಣದಿಂದ ಕಂಗೊಳಿಸುತ್ತವೆ. ಮೊಗ್ಗಾಗಿದ್ದಾಗ ಎಲೆಯಂತೆ ಗೋಚರಿಸುವ ಹೂಗಳು ಬೆಳೆದು ದೊಡ್ಡದಾದಂತೆಲ್ಲಾ ನುಣುಪಾದ ಕಾಗದದಂತೆ ಹೊಳಪುಳ್ಳ ಬಿಳಿಬಣ್ಣ ಅಥವಾ ಗುಲಾಬಿ ಮಿಶ್ರಿತ ಕೆಂಪುಬಣ್ಣದಿಂದ ಕಣ್ಮನ ಸೆಳೆಯುತ್ತದೆ. ಹೂಗಳಲ್ಲಿನ ಕೇಸರಗಳು ಹಳದಿ ಬಣ್ಣದಿಂದ ಕೂಡಿದ್ದರೆ, ಪುಷ್ಪಪತ್ರಗಳು ಹೂವನ್ನು ಮೇಲಕ್ಕೆ ಎತ್ತಿ ನಿಲ್ಲಿಸಿದಂತೆ ಭಾಸವಾಗುತ್ತದೆ. ಬೀಜದಿಂದ ಹುಟ್ಟುವ ಈ ಸಸ್ಯವು ಗಡ್ಡೆ ಅಥವಾ ಕಾಂಡವನ್ನು ಕತ್ತರಿಸಿ ಇಟ್ಟಾಗಲೂ ಚಿಗುರುತ್ತದೆ. ಯಾವುದೇ ರೋಗದಿಂದ ಬಾಧಿಸದ ಈ ಸಸ್ಯಗಳಿಗೆ ಹೂಗಳನ್ನು ಕಚ್ಚಿ ತಿನ್ನುವ ಬಸವನಹುಳು ಹಾಗೂ ಸಿಂಬಳದ ಹುಳುಗಳ ಕಾಟವೇ ಜಾಸ್ತಿ.

–ಪ.ನಾ.ಹಳ್ಳಿ ಹರೀಶ್ ಕುಮಾರ್, ತುಮಕೂರು